# ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬರೂರು




**ಶಾಲೆ ಇರುವ ಊರಿನ ಹೆಸರು : ಬರೂರು**

ಆ ಊರಿಗೆ ಆ ಹೆಸರು ಬರಲು  ಕಾರಣ (ಹಿನ್ನೆಲೆ) – ಮಾಹಿತಿ  ಲಭ್ಯ ಇರುವುದಿಲ್ಲ. ಊರಿನ ಭೌತಿಕ ಪರಿಸರ :- ಪೂರ್ವ ದಿಕ್ಕಿನಲ್ಲಿ ಅಘನಾಶಿನಿ ನದಿ ಹರಿಯುತ್ತಿದೆ. ನದಿಯ ತಟದಲ್ಲಿ ಭತ್ತ, ಕಬ್ಬುಗಳ ಗದ್ದೆ ಹರಡಿದೆ. ಊರಿನ ಸುತ್ತಲೂ ಇರುವಂತಹ ಕಾಗೇರಿ, ನೇಗಾರ, ಅರಸಿಕೇರಿ, ಪಡಿಗೇರಿ, ಕಾನಮೂಲೆ, ಹಳ್ಳಿಕಾನು, ಬೆಳಖಂಡ, ಶೇಡಿಕುಳಿ ಹಾಗೂ ಸೊಪ್ಪಿನ ಮನೆ ಮಜರೆಗಳಲ್ಲಿ ಅಡಿಕೆ, ಕಾಳುಮೆಣಸಿನ ಬಳ್ಳಿಗಳಿಂದ ಕೂಡಿರುವ ತೋಟಗಳಿವೆ. ತೋಟದ ಹೊರತಾಗಿರುವ ಸ್ಥಳಗಳಲ್ಲಿ ಬೆಟ್ಟ ಮತ್ತು ಬೆಣಗಳಿಂದ ಕೂಡಿದೆ. ಸುಮಾರು ಏಳು-ಎಂಟು ಎಕರೆ ಪ್ರದೇಶದಲ್ಲಿ ಅರಣ್ಯ ಇಲಾಖೆಯವರಿಂದ ನಿರ್ಮಿಸಲಾದ ಅಕೇಶಿಯಾ ನೆಡುತೋಪುಗಳಿವೆ.

## ಗ್ರಾಮದೇವತೆ

## ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನ ಬರೂರು



## ಶಿಲಾಶಾಸನದ ಒಂದು ಚಿತ್ರ



## ಶಾಲೆ ಪ್ರಾರಂಭವಾದ ವರ್ಷ : 01-01-1921

### ಶಾಲೆ ಪ್ರಾರಂಭಿಸಲು ಶ್ರಮಿಸಿದ ಮಹನೀಯರು

1) ಗಣೇಶ ರಾಮಕೃಷ್ಣ ಹೆಗಡೆ ಅರಸಿಕೇರಿ
2) ಗಣಪಯ್ಯ ಹೆಗಡೆ ಗುಂಜಿ ಅರಸಿಕೇರಿ
3) ಶಿವರಾಮ ಹೆಗಡೆ ಕಾಗೇರಿ
4) ಮಂಜುನಾಥ ಹೆಗಡೆ ಕಾಗೇರಿ
5) ವೆಂಕಪ್ಪ ಹೆಗಡೆ ನೇಗಾರ
6) ನರಸಿಂಹ ದೇವಪ್ಪ ಹೆಗಡೆ ನೇಗಾರ
7) ಮಾಬ್ಲೇಶ್ವರ ಹೆಗಡೆ ನೇಗಾರ

ಶಾಲೆ ಇರುವ ಊರಿನಲ್ಲಿ ಪುರಾತನವಾದ ಶ್ರೀ ಲಕ್ಷ್ಮೀ ನರಸಿಂಹ ಮಂದಿರವಿದೆ. ಹಾಗೂ ಕದಂಬರ ಕಾಲದ್ದೆನ್ನುವ ಕೆಲವು ಶಿಲಾಶಾಸನಗಳು ಊರಿನ ಬೆಟ್ಟಗಳಲ್ಲಿ ಕಂಡುಬರುತ್ತವೆ. ಇದರ ಹೊರತಾಗಿ ಶ್ರೀ ಮಾರಿಕಾಂಬೆ ದೇವಸ್ಥಾನವೂ ಇಲ್ಲಿದೆ. ವರ್ಷಕ್ಕೊಮ್ಮೆ ಈ ಎರಡೂ ದೇವಸ್ಥಾನಗಳಲ್ಲಿ ವಿಶೇಷ ಕಾರ್ತಿಕ ಸಮಾರಾಧನೆ ನಡೆಯುತ್ತವೆ. ಆ ಸಂದರ್ಭದಲ್ಲಿ ಊರಿನ ಯುವಕರೆಲ್ಲ ಸೇರಿ ನಾಟಕ, ಯಕ್ಷಗಾನ ಕಾರ್ಯಕ್ರಮಗಳು ನಡೆಸಿಕೊಡುತ್ತಾರೆ. ಇದಲ್ಲದೆ ಈ ಊರಿನಲ್ಲಿ ಜಾನಪದ ಕಲೆಯಾದ "ಡೊಳ್ಳಿನ ಕುಣಿತ" ಬಹಳ ಪ್ರಸಿದ್ಧವಾಗಿದೆ. ವಿಶೇಷ ಸಂದರ್ಭಗಳಲ್ಲಿ ಇದರ ಪ್ರದರ್ಶನ ನಡೆಯುತ್ತದೆ. ರಾಜ್ಯ ರಾಷ್ಟ್ರಮಟ್ಟಗಳಲ್ಲಿ ಕೂಡ ಇವರು ತಮ್ಮ ಕಲೆಯನ್ನು ಪ್ರದರ್ಶಿಸಿ ಬಂದಿರುತ್ತಾರೆ.

ಈ ಊರಿನಲ್ಲಿ ಹವ್ಯಕ ಬ್ರಾಹ್ಮಣರು, ನಾಮಧಾರಿ ನಾಯ್ಕರು ಸುಮಾರಾಗಿ ಸಮಪ್ರಮಾಣದಲ್ಲಿದ್ದಾರೆ. ಇವರ ಹೊರತಾಗಿ ದೇವಡಿಗರು, ಮೊಗೇರರು, ಗ್ರಾಮೋಕ್ಕಲಿಗರು, ಹಸಲರರು ಹಾಗೂ ದೈವಜ್ಞ ಬ್ರಾಹ್ಮಣರು ತೋಟ ಜಮೀನನ್ನು ಹೊಂದಿದ್ದು, ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿ ಇದ್ದಾರೆ. ಉಳಿದಂತೆ ಹೆಚ್ಚಿನವರು ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ.

## ಸ್ಥಳದಾನ ಮಾಡಿದವರು



ದಿ॥ ಶ್ರೀ ಈಶ್ವರ ಹೆಗಡೆ

ಸನ್ಮಾನ್ಯರು ನಮ್ಮ ಶಾಲಾ ಕಟ್ಟಡ ನಿರ್ಮಾಣಕ್ಕೆ ಅಗತ್ಯವಾದ ಜಮೀನನ್ನು ತಮ್ಮ ಜಮೀನಿನಲ್ಲಿ 10 ಗುಂಟೆಯಷ್ಟನ್ನು ಸ್ವ ಸಂತೋಷದಿಂದ ಶಾಲೆಗೆ ದಾನವಾಗಿ ನೀಡಿ ಸುಮಾರು 6 ದಶಕಗಳ ಹಿಂದೆಯೇ ತಮ್ಮ ಉದಾರತೆಯನ್ನು ಮೆರೆದಿದ್ದಾರೆ. ಈ ಶಾಲೆಯಲ್ಲಿ ಸಾವಿರಾರು ಜನರು ವಿದ್ಯಾರ್ಜನೆ ಮಾಡಿ ಅನೇಕ ಉನ್ನತ ಸ್ಥಾನಗಳಿಗೆ ಏರಿದ್ದಾರೆ. ದೇಶಪ್ರೇಮಿಗಳಾಗಿದ್ದಾರೆ. ಉತ್ತಮ ನಾಗರಿಕರಾಗಿ ರೂಪಿಸುವಲ್ಲಿ ಕಾರಣೀಕರ್ತರಾಗಿದ್ದಾರೆ. ಹಾಗೂ ಅನುಕರಣೀಯರಾಗಿದ್ದಾರೆ. ಇವರಿಗೆ ನಮ್ಮ ಶಾಲೆಯ ಸರ್ವರಿಂದ ಹಾಗೂ ಊರಿನ ಎಲ್ಲಾ ನಾಗರಿಕರಿಂದ ಹೃದಯ ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.



ಶ್ರೀ ಗಣಪಯ್ಯ ಹೆಗಡೆ
ಗುಂಜಿ ಅರಸಿಕೇರಿ.

ಶ್ರೀಯುತರ ತಂದೆಯವರು 10 ಗುಂಟೆ ಜಮೀನನ್ನು ನಮ್ಮ ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ದಾನವಾಗಿ ನೀಡಿದ್ದರು. ಪ್ರಸ್ತುತ ಹೊಸ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಅಗತ್ಯವಿದ್ದ ಸುಮಾರು 6 ಗುಂಟೆಯಷ್ಟು ಜಮೀನನ್ನು ಶ್ರೀ ಗಣಪತಿ ಹೆಗಡೆ ಅರಸಿಕೇರಿಯವರು ಉದಾರ ಮನಸ್ಸಿನಿಂದ ದಾನವಾಗಿ ನೀಡಿರುತ್ತಾರೆ. ಅವರಿಗೆ ಶಿಕ್ಷಣ ಇಲಾಖೆ, ನಮ್ಮ ಶಾಲಾ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಪ್ರಭಾಕರ ರಾಮಾ ನಾಯ್ಕ ಹಾಗೂ ಉಪಾಧ್ಯಕ್ಷರು ಹಾಗೂ ಇತರ ಸದಸ್ಯರುಗಳು ಶಾಲಾ ಮುಖ್ಯಾಧ್ಯಾಪಕರು ಹಾಗೂ ಸಹ ಶಿಕ್ಷಕರು ಮತ್ತು ನಮ್ಮ ಶಾಲೆಗೆ ಒಳಪಡುವ ಎಲ್ಲಾ ಮಜರೆಗಳ ಸಮಸ್ತ ನಾಗರಿಕರು ಅನಂತಾನಂತ ಧನ್ಯವಾದಗಳನ್ನು ಅರ್ಪಿಸುತ್ತೇವೆ.



***ಸನ್ಮಾನ್ಯ ಶ್ರೀ ವಿಶ್ವೇಶ್ವರ ಅನಂತ ಹೆಗಡೆ ಕಾಗೇರಿ***

***ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು***

***ಹಾಗೂ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು***

ಸನ್ಮಾನ್ಯರು ಇದೇ ಶಾಲೆಯಲ್ಲಿ ಕಲಿತವರು ಅಲ್ಲದೇ ಶಾಲೆಯ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಸದಾಕಾಲವೂ ನೆರವಿನ ಹಸ್ತ ನೀಡುತ್ತಿದ್ದಾರೆ. ನಮ್ಮ ಶಾಲೆಯಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಿಗೂ ಸದಾ ಸಹಾಯ ನೀಡುತ್ತಾ ಕಾರ್ಯಕ್ರಮ ಯಶಸ್ವಿಯಾಗಲು ಕಾರಣೀಕರ್ತರಾಗಿರುತ್ತಾರೆ. ಕಾಲಕಾಲಕ್ಕೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ. ಹಾಗೂ ನಮ್ಮ ಶಾಲೆ ಒಂದು ಮಾದರಿ ಶಾಲೆ ಆಗುವಂತೆ ಪ್ರೇರೆಪಿಸಿದ್ದಾರೆ.

## ಪ್ರಸ್ತುತ ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ ವೃಂದ




1) ಶ್ರೀಮತಿ ಲತಾ ಎನ್. ಕರ್ಕಿ (ಮುಖ್ಯಾಧ್ಯಾಪಕಿ)
2) ಶ್ರೀ ಸತೀಶ ಎಸ್. ಗುನಗ (ಸಹಶಿಕ್ಷಕ)
3) ಶ್ರೀಮತಿ ಗೀತಾ ಎಸ್. ಶೆಟ್ಟಿ (ಸಹಶಿಕ್ಷಕರು)
4) ಶ್ರೀಮತಿ ಮಾಲಾ ಎಸ್. ಬಲ್ಲಾಳ (ಸಹಶಿಕ್ಷಕರು)

**ಮಕ್ಕಳ ಸಂಖ್ಯೆ**

| **ಗಂಡು** | **ಹೆಣ್ಣು** | **ಒಟ್ಟೂ** |
|---|---|---|
| 27 | 24 | 51 |

**ಕೊಠಡಿಗಳ ಸಂಖ್ಯೆ**

| ಪಕ್ಕಾ | ಕಚ್ಚಾ | ಇತರೆ | ದಾಸ್ತಾನು ಕೊಠಡಿ |
|---|---|---|---|
| 4 | – | 5 | 1 |

**ನಲಿಕಲಿ ಅನುಷ್ಠಾನ :**




ಈ ಶಾಲೆಯಲ್ಲಿ ನಲಿಕಲಿ ಅನುಷ್ಠಾನವನ್ನು ಉತ್ತಮವಾಗಿ ಮಾಡಿದ್ದು, ಶಿಕ್ಷಕರು ಅದಕ್ಕೆ ಪೂರಕವಾಗಿ ಸಿದ್ಧತೆಯೊಂದಿಗೆ ವಿದ್ಯಾರ್ಥಿಗಳಿಗೆ ಚಟುವಟಿಕೆಗಳ ಮೂಲಕ ಉತ್ತಮ ಕಲಿಕೆಯಾಗುವಂತೆ ಶ್ರಮಿಸುತ್ತಿದ್ದಾರೆ. ನಲಿಕಲಿಗೆ ಪೂರಕವಾದ ಸಾಮಗ್ರಿಗಳನ್ನು ಜೋಡಿಸಿಕೊಂಡಿದ್ದು, ವಿದ್ಯಾರ್ಥಿಗಳಲ್ಲಿ ಸಂತಸದಾಯಕ ಕಲಿಕೆಯನ್ನು ಗಮನಿಸಲಾಗಿದೆ.

**ಯೋಗ ಕಾರ್ಯಕ್ರಮ :**



ಈ ಶಾಲೆಯಲ್ಲಿ ಶೈಕ್ಷಣಿಕ ಗುಣ್ಮಮಟ್ಟ ಹೆಚ್ಚಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ಪ್ರತಿ ಗುರುವಾರ ಕೊನೆಯ ಅವಧಿಯಲ್ಲಿ ನುರಿತ ಯೋಗ ಶಿಕ್ಷಕಿಯರಿಂದ 5,6, ಮತ್ತು 7ನೇ ತರಗತಿಯವರೆಗೆ ಯೋಗ ಶಿಕ್ಷಣವನ್ನು ನೀಡಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳ ದೈಹಿಕ ಮತ್ತು ಭೌತಿಕ ವಿಕಾಸಕ್ಕೆ ಅನುಕೂಲವಾಗಿದೆ. ಶಿಕ್ಷಕಿಯವರಿಗೆ ನೀಡಬೇಕಾದ ಗೌರವ ಧನವನ್ನು ಸ್ಥಳೀಯ ದಾನಿಗಳು ಪೂರೈಸುತ್ತಿದ್ದಾರೆ.

**ಎಜ್ಯುಸ್ಯಾಟ್ ಕಾರ್ಯಕ್ರಮ :**



ತಾಲೂಕಿನಲ್ಲಿ ಪ್ರಥಮವಾಗಿ 'ಎಜ್ಯುಸ್ಯಾಟ್' ವ್ಯವಸ್ಥೆಯನ್ನು ಈ ಶಾಲೆಯಲ್ಲಿ ಅಳವಡಿಸಿಕೊಂಡು ಅದರ ಸಂಪೂರ್ಣ ಪ್ರಯೋಜನವನ್ನು ಮಕ್ಕಳಿಗೆ ನೀಡಲಾಗುತ್ತಿದೆ. ಇದರಲ್ಲಿ ಮೂಡಿಬರುವ ಶೈಕ್ಷಣಿಕ ಕಾರ್ಯಕ್ರಮಗಳು ತುಂಬಾ ಉತ್ತಮವಾಗಿದ್ದು, ಮಕ್ಕಳಿಗೆ ದೃಶ್ಯಮಾದ್ಯಮದ ಮೂಲಕ ಶಿಕ್ಷಣ ನೀಡುವತ್ತ ಶಾಲೆ ಮಾದರಿಯಾಗಿದೆ.

**ರೀಡಿಂಗ್ ಕಾರ್ನರ್ :**



ಶಾಲಾ ವಿದ್ಯಾರ್ಥಿಗಳ ಬೌದ್ಧಿಕ ವಿಕಾಸಕ್ಕೆ ಹಾಗೂ ಮನರಂಜನೆಗೆ ಸಹಜಾರಿಯಾಗುವಂತೆ 2008-09ನೇ ಸಾಲಿನ ಎಂಡಿಪಿ ತಂಡದವರ ಮಾರ್ಗದರ್ಶನದ ಮೇರೆಗೆ **'ರೀಡಿಂಗ್ ಕಾರ್ನರ್'** ನಿರ್ಮಿಸಲಾಗಿದೆ. ಇದರಲ್ಲಿ ಸುಮಾರು 3000ದಷ್ಟು ಪುಸ್ತಕಗಳ ಸಂಗ್ರಹವಿದೆ. ಇದಕ್ಕೆ ಅನೇಕ ಮಹನೀಯರು ಪುಸ್ತಕಗಳ ಸಂಗ್ರಹವಿದೆ. ಇದಕ್ಕೆ ಅನೇಕ ಮಹನೀಯರು ಪುಸ್ತಕಗಳನ್ನು ದಾನವಾಗಿ, ಕೊಡುಗೆಯಾಗಿ ನೀಡಿರುತ್ತಾರೆ. **'ಇನಫೋಸಿಸ್'** ಹಾಗೂ **'ಹೋರಾ ಫೌಂಡೆಶನ್'** ಹಾಗೂ ಎಸ್.ಡಿ.ಎಂ.ಸಿಯಿಂದ ಕೂಡ ಉತ್ತಮ ಪುಸ್ತಕಗಳು ಸಂಗ್ರಹವಾಗಿದೆ. ಈ ಪುಸ್ತಕಗಳನ್ನು ಮಕ್ಕಳು ಮುಕ್ತವಾಗಿ ಬಳಸುವಂತೆ ವ್ಯವಸ್ಥೆ ಮಾಡಲಾಗಿದೆ. ಎಲ್ಲಾ ವಿದ್ಯಾರ್ಥಿಗಳು ಇದರ ಸಂಪೂರ್ಣ ಪ್ರಯೋಜನ ಪಡೆಯುತ್ತಿದ್ದಾರೆ.

**ವಿಜ್ಞಾನ ಪ್ರಯೋಗಾಲಯ :**



ಪ್ರಾಥಮಿಕ ಹಂತದಲ್ಲಿ ಬರುವ ಎಲ್ಲಾ ವೈಜ್ಞಾನಿಇಕ ಪ್ರಯೋಗಗಳನ್ನು ಮಾಡಲು ಅನುಕೂಲವಾಗುವಂತೆ ಈ ಶಾಲೆಯಲ್ಲಿ ಕಲಿತ ಹಳೆಯ ವಿದ್ಯಾಥಿನಿಯೊಬ್ಬರ ಮಗಳಾದ ಶ್ರೀಮತಿ ರೇಣುಕಾ ಶಿಲ್ಪಾ ಹೆಗಡೆ ಇವರು ತಾವು ಕೆಲಸ ಮಾಡುತ್ತಿದ್ದ ಸಂಸ್ಥೆಯಿಂದ 400000 ರೂಪಾಯಿ ಮೌಲ್ಯದ ವಿಜ್ಞಾನ ಉಪಕರಣಗಳನ್ನು ಒದಗಿಸಿದ್ದಾರೆ. ಇದರ ಸಂಪೂಣ್ ಸದ್ಬಳಕೆಯನ್ನು ಶಾಲೆಯವರು ಬಳಸಿಕೊಳ್ಳುತ್ತಿದ್ದಾರೆ.

ವಿದ್ಯಾರ್ಥಿಗಳಲ್ಲಿ ಉತ್ತಮ ಸಂಸ್ಕಾರ ಬೆಳೆಸುವ ದೃಷ್ಟಿಯಿಂದ "ಹೋರಾ ಫೌಂಡೇಶನ್"ರವರು ಪ್ರತಿ ಸೋಮವಾರ ಕೊನೆಯ ಅವಧಿಯಲ್ಲಿ ನೀತಿ ಪ್ರಧಾನ ಕಥೆಗಳನ್ನು ಹೇಳುವ ಹಾಗೂ ಭೌದ್ಧಿಕ ವಿಕಾಸಕ್ಕೆ ಅನುಕೂಲವಾಗುವ ಆಟಗಳನ್ನು ಆಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಮಡಿರುತ್ತಾರೆ.

ಸೇವಾದಲ ಶಾಖೆಯೂ ಕೂಡ ಈ ಶಾಲೆಯಲ್ಲಿದ್ದು, ವಿದ್ಯಾರ್ಥಿಗಳಿಗೆ ದೇಶಪ್ರೇಮ, ಶಿಸ್ತು ಹಾಗೂ ಮಹಾಪುರುಷರ ಬಗ್ಗೆ ತಿಳಿಸುವುದರೊಂದಿಗೆ ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಎಲ್ಲಾ ಚಟುವಟಿಕೆಗಳು ಹಾಗು ವ್ಯಾಯಾಮ ಗಳನ್ನು ನಿಯಮಿತವಾಗಿ ರೂಢೀಸಲಾಗುತ್ತಿದೆ.

ಶನಿವಾರ ಮಧ್ಯಾಹ್ನ ಶಾಲಾ ಅವಧಿಯ ನಂತರ 'ಅಬಾಕಸ್' ತರಗತಿ ನಡೆಸಲಾಗುತ್ತಿದ್ದು, ಸುಮಾರು 20 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಅವರಿಗೆ ನಡೆಸಿದ ತಾಲೂಕಾ ಮಟ್ಟದ ಸ್ಪರ್ಧೆಯಲ್ಲಿ ಶಾಲೆಯ ವಿದ್ಯಾಥಿನಿಯರಿಗೆ ಬಹುಆನ ಲಭಿಸಿದೆ.

ಕ್ರೀಡಾಕೂಟ, ಪ್ರತಿಭಾ ಕಾರಂಜಿ,ಯಂತಹ ಪಠ್ಯೇತರ ಚಟುವಟಿಕೆಯಲ್ಲಿಯೂ ಸಹ ಶಾಲೆಯ ಪಾಲ್ಗೊಳ್ಳುವಿಕೆ ಉತ್ತಮವಾಗಿದ್ದು, ಜಿಲ್ಲಾಮಟ್ಟದಲ್ಲಿ ಪ್ರತಿನಿಧಿಸಿ ಬಹುಮಾನ ಪಡೆದ ಕೀರ್ತಿ ಈ

ಶಾಲೆಯದ್ದಾಗಿದೆ. ಚಿಣ್ಣರ ಜಿಲ್ಲಾ ದರ್ಶನದಂತಹ ಕಾರ್ಯಕ್ರಮದಲ್ಲಿಯೂ ಪಾಲ್ಗೊಂಡು ಸದರಿ ಕಾರ್ಯಕ್ರಮದ ಪ್ರವಾಸ ಕಥನ ಬರೆಯುವ ಸ್ಪರ್ಧೆಯಲ್ಲಿ ಶಾಲೆಯ ಕುಮಾರಿ ರಾಜಲಕ್ಷ್ಮೀ ವಿಶ್ವೇಶ್ವರ ಹೆಗಡೆ ಇವಳು ತಾಲೂಕಾ ಮಟ್ಟದಲ್ಲಿ ಪ್ರಥಮ ಅದೇ ರೀತಿ 'ಬಂಧುವಿಗೊಂದು ಪತ್ರ' ಬರೆಯುವ ಸ್ಪರ್ಧೆಯಲ್ಲಿ ತಾಲೂಕಾ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾಳೆ.

ಶಾಲಾ ಭೌತಿಕ ಬೆಳವಣಿಗೆಯ ಕುರಿತಾಗಿ 2008-09ನೇ ಸಾಲಿನಲ್ಲಿ ಎಸ್.ಎಸ್.ಎ ಯೋಜನೆಯಡಿಯಲ್ಲಿ 3 ಹೆಚ್ಚುವರಿ ಕೊಠಡಿ ಮಂಜೂರಾದೆ. 20-11-2009ರಂದು ಸನ್ಮಾನ್ಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಉದ್ಘಾಟನೆಗೊಂಡಿರುತ್ತದೆ. 2009-10ನೆ ಸಾಲಿನಲ್ಲಿ ರಾಜ್ಯ ಯೋಜನೆಯಡಿಯಲ್ಲಿ ಮೂರು ಹೆಚ್ಚುವರಿ ಕೊಠಡಿ ಮಂಜೂರಾಗಿದೆ. ಅದೇ ರೀತಿ 60000 ರೂ ಮೊತ್ತದ ಅಕ್ಷರ ದಾಸೋಹ ಕೊಠಡಿ ಮಂಜೂರಾಗಿದೆ. ಒಂದು ಕಂಪ್ಯೂಟರ್ ಕೊಠಡಿ, ಹಾಘೂ ಇನ್ನೊಂದು ಎಜ್ಯುಸ್ಯಾಟ್ ಕೊಠಡಿಯನ್ನೂ ಸಹ ನಿರ್ಮಿಸಲಾಗಿದೆ. ಸುಂದರವಾದ ರಂಗಮಂದಿರವನ್ನೂ ಸಹ ನಿರ್ಮಿಸಲಾಗಿದ್ದು ಶಾಲಾ ಭೌತಿಕ ಸಂದರ್ಯಕ್ಕೆ ಮೆರಗು ನೀಡಿರುತ್ತದೆ. ವಿಶಾಲವಾದ ಆಟದ ಮೈದಾನ ನಿರ್ಮಾಣವಾಗಿರುತ್ತದೆ. ರಂಗಮಂದಿರದ ಅಕ್ಕಪಕ್ಕದಲ್ಲಿ ಸುಂದರವಾದ ಕೈತೋಟ ನಿರ್ಮಾಣವಾಗಿದೆ.












ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಬಿಸಿಯೂಟ ಕಾರ್ಯಕ್ರಮ ಉತ್ತಮವಾಗಿ ಚೆನ್ನಾಗಿ ನಡೆಯುತ್ತಿದೆ. ಅಡುಗೆ ಸಿಬ್ಬಂದಿಯವರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡುತ್ತಿದ್ದಾರೆ. ಈ ಯೋಜನೆ ಯಶ್ವವಿಯಾಗಿ ನಡೆಯಲು ಊರವರ ಸಹಕಾರ ತುಂಬಾ ಚೆನ್ನಾಗಿ ದೊರಕುತ್ತಿದೆ. ಬಿಸಿಯೂಟದ ತಯಾರಿಕೆಗೆ ಅಗತ್ಯವಾದ ಗ್ರ್ಯಾಂಡರ್, ಕುಕ್ಕರ್, ಹಾಗೂ ಕೆಲವು ಪಾತ್ರೆಗಳನ್ನು ದಾನಿಗಳು ನಿಡಿರುತ್ತಾರೆ. ಪ್ರತೀ ದಿನ ಮಜ್ಜಿಗೆಯನ್ನು ಕಳುಹಿಸುತ್ತಾರೆ. ಅಷ್ಟೇ ಅಲ್ಲದೇ ಮಾನ್ಯ ಸಚಿವರ ಮನೆಯವರು ಪ್ರತೀ ದಿನ ಊಟಕ್ಕೆ ಉಪ್ಪಿನಕಾಯಿ ನೀಡುವ ವ್ಯವಸ್ಥೆ ಮಾಡಿರುತ್ತಾರೆ. ಕಾಲಕಾಲಕ್ಕೆ ಊರವರು ಹಾಗು ಶಿಕ್ಷಕವೃಂದದವರು ಮಕ್ಕಳಿಗೆ ಸಿಹಿಯೂಟವನ್ನು ನೀಡುತ್ತಿರುವುದು ವಿಶೇಷವಾಗಿದೆ.

ನಮ್ಮ ಶಾಲೆಯಲ್ಲಿ ನಡೆದ ಕ್ಲಸ್ಟರ್ ಹಂತದ ಪ್ರತಿಭಾ ಕಾರಂಜಿಯ ನೆನಪಿನ ಕ್ಷಣಗಳು

ಉದ್ಘಾಟನಾ ಸಮಾರಂಭ



ಸಮಾರೋಪ ಸಮಾರಂಭ



# ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಕ್ಕಳು



